# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 218 |
| ಉತ್ತರಿಸಬೇಕಾದ ದಿನಾಂಕ | 28.01.2026 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬಡವರಿಗೆ ಮನೆಗಳನ್ನು ಮಂಜೂರು ಮಾಡಲು ಯಾವ ಯಾವ ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಿಸಲಾಗಿದೆ ; | ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿನ ಅರ್ಹ ವಸತಿರಹಿತ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ.ಅಂಬೇಡ್ಕರ್ ವಸತಿ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಗಳನ್ನು ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಆವಾಸ್ ಯೋಜನಾ(ನಗರ) ಸರ್ವರಿಗೂ ಸೂರು" ಯೋಜನೆಯ ಅನುದಾನದ ಮೊತ್ತಗಳನ್ನು ಸಂಯೋಜಿಸಿಕೊಂಡು ಸರ್ಕಾರಿ ಜಮೀನಿನಲ್ಲಿ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |
| ಆ) | ಈ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ಮನೆಗಳ ಸಂಖ್ಯೆ ಎಷ್ಟು; ಮತ್ತು ಯಾವ ಯಾವ ಜಾಗದಲ್ಲಿ ಮನೆಗಳನ್ನು ನಿರ್ಮಿಸಲಾಗಿದೆ. | 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ 1 ಬಿ.ಹೆಚ್.ಕೆ. ಯ 45124 ಹಾಗೂ 2 ಬಿ.ಹೆಚ್.ಕೆ. ಯ 3826 ಫ್ಲಾಟ್ ಗಳನ್ನು ನಿರ್ಮಿಸಲಾಗುತ್ತಿದ್ದು, ಯೋಜನಾ ಸ್ಥಳವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ಮನೆಗಳ ಘಟಕ ವೆಚ್ಚ ಎಷ್ಟು; ಫಲಾನುಭವಿಗಳು ಭರಿಸಬೇಕಾದ ವಂತಿಕೆ ಎಷ್ಟು ಮತ್ತು ಸರ್ಕಾರ ನೀಡುವ ಸಹಾಯಧನ ಎಷ್ಟು; (ವಿವರಗಳನ್ನು ನೀಡುವುದು) | ಎ) 1 ಬಿ.ಹೆಚ್.ಕೆ. ಫ್ಲಾಟ್‌ನ ಘಟಕ ಮೊತ್ತದ ವಿವರ ಈ ಕೆಳಗಿನಂತಿದೆ. |

| ಘಟಕ ಮೊತ್ತ (18% ಜಿ.ಎಸ್.ಟಿ. ಒಳಗೊಂಡಂತೆ) | ಸರ್ಕಾರದ ಸಹಾಯಧನ | ಫಲಾನುಭವಿಯ ವಂತಿಕೆ. |
|---|---|---|
| ರೂ.11,23,000/- (ರೂ.3000/- ವಿದ್ಯುತ್ ಸಂಪರ್ಕ ವೆಚ್ಚ) | ಪ.ಜಾ./ಪ.ಪಂ. ರೂ.3,50,000/- | ರೂ.7,73,000/- |
| | ಸಾಮಾನ್ಯ / ಅಲ್ಪಸಂಖ್ಯಾತರು ರೂ.2,70,000/- | ರೂ.8,53,000/- |

ಪ್ರಾರಂಭದಿಂದ ಆರಂಭಿಕ ರೇವಣಿ ಮೊತ್ತವನ್ನು ಪಾವತಿಸಿ ಫ್ಲಾಟ್ ಆಯ್ಕೆ ಮಾಡಿಕೊಂಡಿರುವ 12153 ಫಲಾನುಭವಿಗಳಿಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ರೂ.1,00,000/-ಗಳ ಹೆಚ್ಚುವರಿ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಬಿ) ಪರಿಷ್ಕೃತ 1 ಬಿ.ಹೆಚ್.ಕೆ. ಫ್ಲಾಟ್‌ನ ಘಟಕ ಮೊತ್ತದ ವಿವರ ಈ ಕೆಳಗಿನಂತಿದೆ.

| ಘಟಕ ಮೊತ್ತ (18% ಜಿ.ಎಸ್.ಟಿ. ಒಳಗೊಂಡಂತೆ) | ಸರ್ಕಾರದ ಸಹಾಯಧನ | ಫಲಾನುಭವಿಯ ವಂತಿಕೆ. |
|---|---|---|
| ರೂ.13,23,000/- (ರೂ.3000/- ವಿದ್ಯುತ್ ಸಂಪರ್ಕ ವೆಚ್ಚ) | ಪ.ಜಾ./ಪ.ಪಂ. ರೂ.3,50,000/- | ರೂ.9,73,000/- |
| | ಸಾಮಾನ್ಯ / ಅಲ್ಪಸಂಖ್ಯಾತರು ರೂ.2,70,000/- | ರೂ.10,53,000/- |

| | | |
|---|---|---|
| ಈ) | ಈ ಮನೆಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು; ಫಲಾನುಭವಿಗಳನ್ನು ಬೆಂಗಳೂರು ನಗರ ವಸತಿ ಯೋಜನೆಯಡಿ ಆಯ್ಕೆ ಮಾಡುವ ವಿಧಾನಗಳು ಯಾವುವು; ಯಾವ ಮಾನದಂಡಗಳನ್ನು ಫಲಾನುಭವಿಗಳ ಆಯ್ಕೆಗೆ ಅನುಸರಿಸಲಾಗುವುದು; | 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ 1 ಬಿ.ಹೆಚ್.ಕೆ. ಯ 45124 ಹಾಗೂ 2 ಬಿ.ಹೆಚ್.ಕೆ. ಯ 3826 ಫ್ಲಾಟ್ ಗಳನ್ನು ನಿರ್ಮಿಸಲಾಗುತ್ತಿದ್ದು, ಈ ಪೈಕಿ 1 ಬಿ.ಹೆಚ್.ಕೆ. ಯ 7890 ಫ್ಲಾಟ್‌ಗಳ ಹಾಗೂ 2 ಬಿ.ಹೆಚ್.ಕೆ. ಯ 304 ಫ್ಲಾಟ್ ಗಳ ನಿರ್ಮಾಣ ಕಾಮಗಾರಿಯು ಪೂರ್ಣಗೊಳಿಸಲಾಗಿದ್ದು, ಪೂರ್ಣ ಮೊತ್ತವನ್ನು ಪಾವತಿಸುವ ಫಲಾನುಭವಿಗಳ ಹೆಸರಿಗೆ ಫ್ಲಾಟ್ ಅನ್ನು ನೋಂದಣಿ ಮಾಡಿ ಹಸ್ತಾಂತರಿಸಲಾಗುತ್ತಿದ್ದು, ಈ ವರೆಗೆ 1 ಬಿ.ಹೆಚ್.ಕೆ. ಯ 3298 ಫ್ಲಾಟ್ ಗಳನ್ನು ಹಾಗೂ 2 ಬಿ.ಹೆಚ್.ಕೆ. ಯ 295 ಫ್ಲಾಟ್ ಗಳನ್ನು ಫಲಾನುಭವಿಗಳ ಹೆಸರಿಗೆ ನೋಂದಣಿ ಮಾಡಿ ಹಸ್ತಾಂತರಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ವಇ 112 ಹೆಚ್‌ಎಫ್‌ಎ 2021, ಬೆಂಗಳೂರು, ದಿನಾಂಕ: 05.07.2021 ರಲ್ಲಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ" ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿರುವ ಮಾನದಂಡಗಳು ಈ ಕೆಳಗಿನಂತಿವೆ;<br><br>1. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ರೂ.300000/- (ಮೂರು ಲಕ್ಷ ರೂಪಾಯಿಗಳು ಮಾತ್ರ) ಗಳ ಮಿತಿಯೊಳಗಿರಬೇಕು.<br>2. ಅರ್ಜಿದಾರರು ಕನಿಷ್ಠ 5 ವರ್ಷಗಳಿಂದ ಬೆಂಗಳೂರು (ನಗರ) ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸವಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ವಾಸ ದೃಢೀಕರಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.<br>3. ವಸತಿರಹಿತ ಕುಟುಂಬವಾಗಿರಬೇಕು.<br>4. ಅರ್ಜಿದಾರರು ಕಡ್ಡಾಯವಾಗಿ ಆಧಾರ್ ಸಂಖ್ಯೆಯನ್ನು ಹೊಂದಿರಬೇಕು.<br>5. ಅರ್ಜಿದಾರರು ಪಡಿತರ ಚೀಟಿಯನ್ನು ಹೊಂದಿರಬೇಕು.<br>6. ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ. (ಅರ್ಜಿದಾರರು ಕಂದಾಯ ಇಲಾಖೆಯಿಂದ ನೀಡಲಾಗುವ ಆದಾಯ ಪ್ರಮಾಣ ಪತ್ರದ ಸಂಖ್ಯೆಯನ್ನು ಮಾತ್ರ ನಮೂದಿಸುವುದು. ಸದರಿ ಮಾಹಿತಿಯನ್ನು ತಂತ್ರಾಂಶದ ಸಹಾಯದಿಂದ ಕಂದಾಯ ಇಲಾಖೆಯ ಡಾಟಾಬೇಸ್ ನಿಂದ "ವೆಬ್ ಸರ್ವೀಸ್" ಮೂಲಕ ನೇರವಾಗಿ ಸೆಳೆದು, ತಾಳೆ ಹಾಕಿ ಖಚಿತಪಡಿಸಿಕೊಳ್ಳಲಾಗುವುದು)<br>7. ಅರ್ಜಿದಾರರು ಕಾರ್ಮಿಕ ಇಲಾಖೆಯ ನೋಂದಣಿ ಸಂಖ್ಯೆ (ಕಟ್ಟಡ ನಿರ್ಮಾಣ ಕಾರ್ಮಿಕರಾಗಿದ್ದಲ್ಲಿ) ಹೊಂದಿರಬೇಕು.<br>8. ಅರ್ಜಿದಾರರು ಚುನಾವಣಾ ಆಯೋಗದ ಗುರುತಿನ ಚೀಟಿ ಸಂಖ್ಯೆಯನ್ನು ಹೊಂದಿರಬೇಕು.<br>9. ಅರ್ಜಿದಾರರು ವಿಕಲಚೇತನರಾಗಿದ್ದಲ್ಲಿ, ಆ ಬಗ್ಗೆ ಪ್ರಮಾಣ ಪತ್ರವನ್ನು ಹೊಂದಿರಬೇಕು.<br>10. ಅರ್ಜಿದಾರರು ಆಧಾರ್ ಫೀಡ್ ಆಗಿರುವ ಬ್ಯಾಂಕ್ ಖಾತೆ ಸಂಖ್ಯೆಯನ್ನು ಹೊಂದಿರಬೇಕು.<br>11. ಕ್ಯಾಬ್ ಡ್ರೈವರ್, ಮನೆ ಕೆಲಸದವರು, ತಳ್ಳುವ ಗಾಡಿಯಲ್ಲಿ ಮಾರುವವರು, ರಸ್ತೆ ಬದಿಯಲ್ಲಿ ಮಾರುವವರಿಗೆ ಮೊದಲ ಆಧ್ಯತೆ ನೀಡಲಾಗುವುದು. |

| | | |
|---|---|---|
| | | 12. ಪ್ರತಿ ಕುಟುಂಬಕ್ಕೆ ಒಂದು ಅರ್ಜಿಯನ್ನು ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.<br>13. ಆಯ್ಕೆಗೊಂಡ ಅರ್ಜಿದಾರರು ಪ್ರಾರಂಭಿಕ ಠೇವಣಿಯಾಗಿ ರೂ.100000/- (ರೂಪಾಯಿ ಒಂದು ಲಕ್ಷ ಮಾತ್ರ) ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ವಇ 61 ಹೆಚ್‌ಎಫ್‌ಎ 2022, ಬೆಂಗಳೂರು, ದಿನಾಂಕ: 12.05.2022 ರಂತೆ ರೂ.50000/- (ರೂಪಾಯಿ ಐವತ್ತು ಸಾವಿರಗಳು ಮಾತ್ರ) ಗಳನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಪಾವತಿಸುವುದು.<br>14. ಒಂದು ವೇಳೆ ಆಯ್ಕೆಯಾದ ಅರ್ಜಿದಾರರು ಈ ಹಿಂದೆ ಯಾವುದೇ ಸರ್ಕಾರಿ ಇಲಾಖೆ/ಸಂಸ್ಥೆಯಿಂದ ವಸತಿ/ನಿವೇಶನ ಪಡೆದಿರುವುದು ಅಥವಾ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಯಡಿಯಲ್ಲಿನ ಯಾವುದೇ ಘಟಕದಡಿ ವಸತಿ ಸೌಲಭ್ಯದ ಪ್ರಯೋಜನ ಪಡೆದಿರುವುದು ಕಂಡುಬಂದಲ್ಲಿ, ಈ ಹಂಚಿಕೆಯನ್ನು ರದ್ದುಪಡಿಸಿ, ಪಾವತಿಸಿರುವ ಮೊತ್ತವನ್ನು ಸರ್ಕಾರದಿಂದ ಮುಟ್ಟುಗೋಲುಹಾಕಿಕೊಳ್ಳಲಾಗುವುದು.<br>15. ಫಲಾನುಭವಿಗಳಿಗೆ ಮನೆಗಳ ಹಂಚಿಕೆಯ ಮೀಸಲಾತಿಯನ್ನು ಪರಿಶಿಷ್ಟ ಜಾತಿಯವರಿಗೆ ಶೇ. 30 ರಷ್ಟು, ಪರಿಶಿಷ್ಟ ಪಂಗಡದವರಿಗೆ ಶೇ.10 ರಷ್ಟು, ಅಲ್ಪಸಂಖ್ಯಾತರಿಗೆ ಶೇ.15 ರಷ್ಟು ಹಾಗೂ ಇತರೆ ವರ್ಗಕ್ಕೆ ಶೇ.45 ರಷ್ಟು ಎಂಬುದಾಗಿ ನಿಗಧಿಪಡಿಸಲಾಗಿದ್ದು, ಯೋಜನೆಯ ಒಟ್ಟು ಶೇ.2 ರಷ್ಟು ಮನೆಗಳನ್ನು ವಿಕಲಚೇತನರಿಗೆ ನೆಲಮಹಡಿಯಲ್ಲಿ ಹಂಚಿಕೆ ಮಾಡಲಾಗುವುದು.<br><br>ಸಾರ್ವಜನಿಕ ಕೋಟಾದಡಿಯಲ್ಲಿ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರು ಆರಂಭಿಕ ಠೇವಣಿ ಮೊತ್ತ ರೂ.50,000/-ಗಳನ್ನು ಪಾವತಿಸಿ, ತಾವು ಇಚ್ಛಿಸಿದ ಫ್ಲ್ಯಾಟ್ ಅನ್ನು ತಾವೇ ಸ್ವತಃ ಆನ್-ಲೈನ್ ಮೂಲಕ ಆಯ್ಕೆ ಮಾಡಿಕೊಳ್ಳಬೇಕಿರುತ್ತದೆ.<br><br>ಸ್ಥಳೀಯ ಕೋಟಾದಡಿಯಲ್ಲಿ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರು ಆರಂಭಿಕ ಠೇವಣಿ ಮೊತ್ತ ರೂ.50,000/-ಗಳನ್ನು ಪಾವತಿಸಿದ ಅರ್ಜಿದಾರರನ್ನು ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ನಗರಾಶ್ರಯ ಸಮಿತಿಯ ಮೂಲಕ ಆಯ್ಕೆ ಮಾಡಲಾಗುವುದು. |
| ಉ) | ಹಿಂದುಳಿದ ವರ್ಗಗಳ ಅಲೆಮಾರಿ ಮತ್ತು ಅರೆ ಅಲೆಮಾರಿಗಳ ವರ್ಗದ ಬಡವರಿಗೆ ಮನೆಗಳನ್ನು ಹಂಚಿಕೆ ಮಾಡಲು ಅವಕಾಶವಿದೆಯೇ; ಇದ್ದಲ್ಲಿ, ಎಷ್ಟು ಮನೆಗಳನ್ನು ಮೀಸಲಿಡಲಾಗುತ್ತಿದೆ. | "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ" ಹಿಂದುಳಿದ ವರ್ಗಗಳಲ್ಲಿನ ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳಿಗೆ ಸೇರಿದ ಬಡವರಿಗೆ ಮನೆಗಳನ್ನು ಹಂಚಿಕೆ ಮಾಡುವ ಅವಕಾಶವನ್ನು ಒದಗಿಸಲಾಗಿದೆ. ಈ ವರ್ಗಗಳು ಇತರ ವರ್ಗಗಳಿಗೆ ಮೀಸಲಾಗಿರುವ 45% ಮೀಸಲಾತಿಯ ಒಳಗೆ ಬರುತ್ತವೆ. |

ಸಂಖ್ಯೆ: ವಇ 7 ಹೆಚ್‌ಎಫ್‌ಎ 2026]

(ಬಿ.ಝಡ್. ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.

# ಅನುಬಂಧ

| 2 B.H.K. Flats | | | |
|---|---|---|---|
| **Sl No** | **Constituency** | **Location and Sy.No** | **No's of DUs** |
| 1 | Anekal | Anekal Gramanthara Sy. No. 509 | 653 |
| 2 | Anekal | Gulimangala Sy. No. 67 | 144 |
| 3 | Anekal | Lingapura Sy. No. 112 | 266 |
| 4 | Dasarahalli | Ganigarahalli Sy. No. 74 | 135 |
| 5 | K R Puram | K Narayanapura Sy. No. 40 | 160 |
| 6 | Yashwanthpur | Bheemankuppe Sy. No. 118 | 96 |
| 7 | Yashwanthpur | Kenchanapura Sy. No. 63 | 1067 |
| 8 | Yashwanthpur | Muddayyanapalya Sy. No. 28 | 312 |
| 9 | Yashwanthpur | Nelaguli Parcle-02 Sy. No. 145 | 194 |
| 10 | Yashwanthpur | Nelaguli Parcle-03 Sy. No. 145 | 166 |
| 11 | Yelahanka | Nagadasanahalli Sy. No. 63 | 489 |
| 12 | Yelahanka | Thotagere Sy. No. 14 | 144 |
| **Total** | | | **3826** |